ಮಗು: ಅಂದರೆ ನಾವೂ ಲಂಗೋಟಿ ಹಾಕ್ಕೊಂಡೇ ಓಡಾಡಬೇಕಾ ಗಾಂಧೀಜಿ ಥರಾ? ಹೋದ ವರ್ಷ ನಮ್ಮ ಸ್ಕೂಲಿನ ಶಂಕ್ರೂಗೇ ಮೊದಲ ಬಹುಮಾನ ಬಂದಿತ್ತು, ಗಾಂಧೀಜಿ ಥರಾ ವೇಷ ಹಾಕಿದ್ದಕ್ಕೆ...

ಅವನು: ಹಾಗಲ್ಲ. ಗಾಂಧೀಜಿ ಇನ್ನೊಂದ್ ಮಾತನ್ನು ಹೇಳಿದ್ರು... ಆ ಮಾತನ್ನು ಜಗತ್ತಿನ ಎಲ್ಲ ಪರಿಸರವಾದಿಗಳೂ ಮತ್ತೆ ಮತ್ತೆ ಹೇಳ್ತಾ ಇರ್ತಾರೆ. ಅದು ಏನು ಅಂದ್ರೆ– **'The world has enough for everyone's need, but not enough for everyone's greed.'** 'ಎಲ್ಲರ ಆಸೆಗಳನ್ನೂ ಪೂರೈಸುವಷ್ಟು ಸಂಪತ್ತು ಈ ಜಗತ್ತಿನಲ್ಲಿ ಇದೆ. ಆದರೆ, ಎಲ್ಲರ ದುರಾಸೆಗಳನ್ನು ಪೂರೈಸುವಷ್ಟು ಇಲ್ಲ' ಅಂತ. ಭೂಮಿಗೆ ಈಗ ತುಂಬಾ ಸಂಕಟ ಬಂದಿದೆ. 'ನಮಗೆ ಇನ್ನೂ ಬೇಕು, ಮತ್ತಷ್ಟು ಬೇಕು' ಅಂತ ಕೆಲವು ದೇಶಗಳ ಜನರು, ನಮ್ಮ ದೇಶದಲ್ಲೂ ಅದೆಷ್ಟೋ ಜನರು ಸಂಪತ್ತನ್ನು ಗುಡ್ಡೆ ಹಾಕ್ಕೋತಾ ಹೋಗ್ತಾರಲ್ಲ – ಭಾರೀ ದೊಡ್ಡ ಬಂಗ್ಲೆ, ಮೂರು ನಾಲ್ಕು ಕಾರು, ಈಜುಗೊಳ – ಅಷ್ಟೊಂದು ವೈಭೋಗ, ಅಷ್ಟೊಂದು ದುರಾಸೆ ಇದ್ದರೆ ಇಡೀ ಭೂಮಿ ಮಿಡತೆ ದಾಳಿಗೆ ಸಿಕ್ಕ ಹಾಗೆ ಬರಡು ಆಗಿಬಿಡತ್ತೆ, ನಮ್ಮ ಆಸೆಗಳು ಹಿತಮಿತ ಇದ್ದಷ್ಟು ದಿನ ಏನೂ ತೊಂದರೆ ಇಲ್ಲ ಅಂತ...

ಅವಳು: ಎಂಥ ದೂರದರ್ಶಿತ್ವ ಇತ್ತಲ್ಲ ಅವರಿಗೆ...

ಅವನು: ಅದೂ ಆಗಿನ ಕಾಲದಲ್ಲಿ ಪರಿಸರವಾದ ಅಂತ ಇರಲೇ ಇಲ್ಲ. ಇಕಾಲಜಿ ಅನ್ನೋ ಮಾತೇ ಇರಲಿಲ್ಲ. ಭೂಮಿ ಬಿಸಿ ಆಗ್ತಾ ಇದೆ, ಜಾಗತಿಕ ತಾಪಮಾನ ಏರ್ತಾ ಇದೆ ಅನ್ನೋ ಮಾತೂ ಇರಲಿಲ್ಲ. ಅರಣ್ಯಗಳು ಹೇರಳವಾಗಿದ್ದವು. ಬೃಹತ್ ಅಣೆಕಟ್ಟು ಇರಲಿಲ್ಲ. ಗಣಿಗಾರಿಕೆ ಅಂದರೆ ಬರೀ ಕಬ್ಬಿಣದ, ಚಿನ್ನದ ಗಣಿ ಅಷ್ಟೇ ಇತ್ತು. ಈಗಿನ ಹಾಗೆ ಮ್ಯಾಂಗನೀಸ್, ಬಾಕ್ಸಾಯಿಟ್, ಯುರೇನಿಯಂ, ಕೊನೆಗೆ ಜಲ್ಲಿಕಲ್ಲಿಗಾಗಿ ಗ್ರಾನೈಟ್, ಕಟ್ಟಡ ಕಟ್ಟೋದಕ್ಕೆ ಮರಳಿನ ಗಣಿಗಾರಿಕೆ ಯಾವುದೂ ಇರಲಿಲ್ಲ. ನೆಡುತೋಪು ಇರಲಿಲ್ಲ. ಬೋರ್ವೆಲ್ ಲಾರಿ ಇರಲಿಲ್ಲ. ಕಲ್ಲಿದ್ದಲ ಹೊಗೆ ಉಗುಳುವ ಉಷ್ಣ ಸ್ಥಾವರ ಇರಲಿಲ್ಲ. ಊರೂರಲ್ಲಿ ಸಿಮೆಂಟ್ ಫ್ಯಾಕ್ಟರಿ, ಕಾಗದ ಫ್ಯಾಕ್ಟರಿ, ಸಕ್ಕರೆ ಫ್ಯಾಕ್ಟರಿ, ಹೊಗೆ ಉಗುಳುವ ಯಾವ ಕಾರ್ಖಾನೆಗಳೂ ಇರಲಿಲ್ಲ. ಆದರೂ ಅವರು ಅವನ್ನೆಲ್ಲ ಮೊದಲೇ ಕಂಡವರ ಹಾಗೆ...

ಅವಳು: ನನಗೆ ಮತ್ತೆ ಮತ್ತೆ ಅದೇ ಪ್ರಶ್ನೆ ಬರ್ತದೆ: ಅವರು ಈಗ ಇದ್ದಿದ್ದರೆ ಹೇಗಿರುತ್ತಿತ್ತೂ ಅಂತ...?

ಅವನು: ಅದನ್ನು ಕೇಳಲೇಬಾರದು! ಅವರು ಇಲ್ಲವಾದರೂ ಅವರ ವಿಚಾರಗಳೆಲ್ಲ ಇದ್ದಾವಲ್ಲ? ನೂರಾ ಏಳು ವರ್ಷಗಳ ಹಿಂದೆ ಅವರು ಬರೆದ 'ಹಿಂದ್ ಸ್ವರಾಜ್' ಅನ್ನೋ ಪುಟ್ಟ ಪುಸ್ತಕ (ಬರೀ 36 ಪುಟಗಳ ಪುಸ್ತಕ) ಈಗಲೂ ಮತ್ತೆ ಮತ್ತೆ ಹೊಸ ಹೊಸ ಚರ್ಚೆಗಳನ್ನು ಹುಟ್ಟು ಹಾಕ್ತಾನೇ ಇದೆ. 'ಯಂತ್ರಗಳನ್ನು ಆಧರಿಸಿದ ಸಮಾಜವನ್ನು ನಿರ್ಮಾಣ ಮಾಡಬಾರದು' ಅಂತ ಅವರು ಅದರಲ್ಲಿ ಹೇಳಿದ್ದರು. ಸ್ವತಂತ್ರ ಭಾರತದ ಅಭಿವೃದ್ಧಿ ಹೇಗೆ ಆಗಬೇಕು ಅನ್ನೋದರ ನೀಲನಕ್ಷೆಯನ್ನು ಅವರು ನಮಗೆ ಕೊಟ್ಟಿದ್ದರು: ಪಾಶ್ಚಾತ್ಯ ಮಾದರಿಯ ಯಂತ್ರಾಧಾರಿತ ಯೋಜನೆಗಳು ಬೇಡ, ವಿಕೇಂದ್ರೀಕೃತ – ಅಂದರೆ ಗ್ರಾಮೀಣ ಜನರ ಅಭಿವೃದ್ಧಿಯ ಕೇಂದ್ರವನ್ನಾಗಿ ಮಾಡಿ, ಅವರ ಕೈಗೆ ಕೆಲಸ ಕೊಡುವಂಥ ಯೋಜನೆಗಳಿಗೆ ಆದ್ಯತೆ ಇರಬೇಕು ಅಂದಿದ್ದರು. ಅಭಿವೃದ್ಧಿ ಎಂದರೆ ಸಮಾನತೆ ಇರಬೇಕು, ಮಹಿಳೆಯರಿಗೆ ಸೂಕ್ತ ಗೌರವ ಸಿಗಬೇಕು, ಕೊಳಕು–ಗಲೀಜು ಇಲ್ಲದ ಸರಳ ಆವಾಸ, ಸರಳ ಬದುಕು ಎಲ್ಲರಿಗೂ ಸಿಗಬೇಕು ಎಂದಿದ್ದರು. ಈಗ ನೋಡಿ, ಎಲ್ಲವೂ ನಗರ ಕೇಂದ್ರಿತ ಆಗಿದ್ದರಿಂದ